‘ದೇವರೇ, ಈ ಸಲಾನಾದ್ರೂ ಕಣ್ಣು ಬಿಟ್ಟು ನೋಡು’ ಎನ್ನುತ್ತಾ ನಂಬಿದ ದೇವರಿಗೆ ಹರಕೆಯ ಮುಡಿಪು ಕಟ್ಟಿಡುತ್ತಾರೆ. ‘ಅತ್ತೇ…’ ಎನ್ನುತ್ತಾ ಸೊಸೆ ಹೊರಬಾಗಿಲಲ್ಲಿ ನಿಂತು ಮುಖ ಬಾಡಿಸಿಕೊಂಡು ಕರೆಯುವ ರೀತಿಯಲ್ಲೇ ನಿರೀಕ್ಷೆ ಕರಗಿ ಹೋಗಿದ್ದರ ಅರಿವಾಗಿ ಮುಖ ಬಾಡಿ ಹೋಗುತ್ತದೆ, ಬೆಂಕಿಯ ಶಾಖಕ್ಕೆ ಹಿಡಿದ ಬಾಳೆಲೆಯಂತೆ. ಪಾರಿಜಾತ ಈ ಕಪ್ಪಿಟ್ಟ ಮುಖ ನೋಡಬಾರದೆಂದು ಮುಖ ತಪ್ಪಿಸುತ್ತಾರೆ ಯಶೋದಮ್ಮ. ‘ತಾನು ದುಡುಕಿಬಿಟ್ಟೆನಾ? ವಂಶ ಮುಂದುವರಿಯದಂತೆ ತಾನೇ ಮೂಲವಾಗಿಬಿಟ್ಟೆನಾ?’ ಎಂದು ಎಷ್ಟೋ ಸಲ ಅನಿಸುತ್ತದೆ. ಮಗ ತಾನು ಹಾಕಿದ ಗೆರೆ ಮೀರಲಿಲ್ಲ. ಸಣ್ಣಕ್ಕಿದ್ದಾಗಲೇ ಅಪ್ಪನನ್ನು ಕಳೆದುಕೊಂಡ ತಮ್ಮನ್ನು ಕಷ್ಟ ಬಿದ್ದು ಸಾಕಿದವಳು ಎನ್ನುವ ಗೌರವ, ವಿಶ್ವಾಸ. ಬೇಕಾದಷ್ಟು ನಗನಟ್ಟು ಹೇರಿ ಮದುವೆ ಮಾಡಿಕೊಟ್ಟಿದ್ದಾನೆ ಅಣ್ಣ. ಈಗಲೂ ಯಾವುದೋ ನೆಪದಲ್ಲಿ ಹೆಣ್ಣುಮಕ್ಕಳಿಗೆ ಒಡವೆ ಖರೀದಿಸಿ ಕೊಡುವುದೆಂದರೆ ಅವನಿಗೆ ಖುಷಿ. ಎಲ್ಲಾ ಇದ್ದೂ ಅದನ್ನು ಮುಂದೆ ಅನುಭವಿಸುವ ಪೀಳಿಗೆ ಇಲ್ಲದಿದ್ದರೆ ಆ ಐಶ್ವರ್ಯಕ್ಕೆ ಏನು ಬೆಲೆ? ದುಡ್ಡಿನಿಂದ ಕೊಂಡುಕೊಳ್ಳಲಾಗದಂತವೂ ಇರುತ್ತವೆ ಎನ್ನುವ ಸತ್ಯವನ್ನು ಹೊಸದಾಗಿ ಕಂಡುಕೊಂಡವರಂತೆ ತಳಮಳಿಸುತ್ತಾರೆ ಯಶೋದಮ್ಮ. ಸದಾ ಮನಸ್ಸಿನಲ್ಲೊಂದು ಅಶಾಂತಭಾವ. ದೇವರಾಯ್ತು, ದಿಂಡರಾಯ್ತು, ಪಂಡಿತರಾಯ್ತು, ಡಾಕ್ಟರಾಯ್ತು. ದುಡ್ಡು ಖರ್ಚು ಮಾಡಿದ್ದಷ್ಟೇ ಬಂತು. ಫಲ ಶೂನ್ಯ. ‘ಇಬ್ಬರಲ್ಲೂ ಯಾವುದೇ ಸಮಸ್ಯೆಯಿಲ್ಲ’ ಎನ್ನುವ ಲೇಡಿಡಾಕ್ಟರ ಮಾತು ಮನಃಶಾಂತಿಯನ್ನು ಕಿಂಚಿತ್ತಾದರೂ ಹಿಡಿದಿಟ್ಟಿದೆಯೇ ವಿನಾ ಇಲ್ಲದಿದ್ದರೆ ಯಾವತ್ತೋ ಅಮ್ಮನಿಗೆ ತಲೆ ಕೆಟ್ಟು ಹೋಗುತ್ತಿತ್ತು ಅನ್ನುತ್ತಾಳೆ ಮದುವೆಯಾಗಿ ದೂರದ ಊರಲ್ಲಿರುವ ಮಗಳು. ಮಗ, ಸೊಸೆಯ ಜೊತೆ ವಿರಾಮವಾಗಿ ಕೂತು ತಮ್ಮನ್ನು ಹಿಂಡಿ ಹಿಪ್ಪೆ ಮಾಡುತ್ತಿರುವ ನೈರಾಶ್ಯ ಭಾವನೆಯನ್ನು ಹಂಚಿಕೊಳ್ಳಲು ಅವರಿಗೆ ಇರಿಸುಮುರಿಸು. ಎಲ್ಲಿ ಮಕ್ಕಳ ಮನಸ್ಸನ್ನು ನೋಯಿಸಿಬಿಡುತ್ತೇನೆಯೋ ಎನ್ನುವ ಹಿಂದೇಟು. ಏನೆಲ್ಲಾ ಹಳವಂಡಗಳು ಗಂಟಲನ್ನು ಸುಡುವ ಬಿಸಿತುಪ್ಪದಂತೆ ಸುಡುತ್ತಿವೆಯೇ ವಿನಾ ಅವಕ್ಕೆ ಹೊರಹರಿವು ಕಲ್ಪಿಸಿಕೊಳ್ಳಲು ಅವರು ಸಿದ್ಧರಿಲ್ಲ. ಒಂದೊಮ್ಮೆ ಸೊಸೆ ಖಾಸಾ ಅಣ್ಣನ ಮಗಳಾಗದೆ ಬೇರೆಯವಳಾಗಿದ್ದರೆ ತಾನು ಹೀಗೆ ಉದಾರವಾಗಿ ಯೋಚಿಸುತ್ತಿದ್ದೆನೇ ಎಂದು ನೆನೆದರೆ ಅವರಿಗೇ ಆ ಬಗ್ಗೆ ನಂಬಿಕೆಯಿಲ್ಲ. ಅಣ್ಣ, ಅತ್ತಿಗೆ ಇಲ್ಲಿಗೆ ಬಂದಾಗ, ಅಥವಾ ತಾವು ಅವರಿರುವಲ್ಲಿಗೆ ಹೋದಾಗ ಸೊಸೆ ಜೊತೆಗಿರುವುದರಿಂದ ಆ ಸಂದರ್ಭದಲ್ಲೂ ಮನಸ್ಸು ಬಿಚ್ಚಿ ಮಾತನಾಡುವುದಕ್ಕೆ ಹಿಂದೆಗೆತ. ಕೊರಗು ಅಣ್ಣ, ಅತ್ತಿಗೆಗಿಲ್ಲವೇ? ಅವರಿಗೂ ಇವರಷ್ಟೇ ಉಂಟು. ಅವರು ಬಾಯಿ ಬಿಟ್ಟು ಹೇಳಿಕೊಳ್ಳುವುದಿಲ್ಲ. ಯಶೋದಮ್ಮನೂ…

★★★

ಸೊಸೆಯ ತಾಯಿಯ ಬಳಗದಲ್ಲಿ ಯಾರೋ ಮೃತಪಟ್ಟಿದ್ದಾರೆ. ವೈಕುಂಠಸಮಾರಾಧನೆಗೆ ಹೋಗಿದ್ದಾರೆ ಮಗ, ಸೊಸೆ.

‘ಬರ್ತೀಯಾದ್ರೆ ನೀನೂ ಬಾ…’ ಕರೆದಿದ್ದ ಮಗ.

‘ನಾನೆಂತಕ್ಕೆ? ಮನೆಗೆ ಬೀಗ ಹಾಕಿ ಹೋಗೋದಾ? ಕಾಲ ಕೆಟ್ಹೋಗಿದೆ’ ವಯಸ್ಸಿಗೆ ತಕ್ಕ ಮಾತಾಡಿದ್ದರು ಯಶೋದಮ್ಮ.

‘ಫ್ರಿಜ್ಜಲ್ಲಿ ಹುಳಿ ಇದೆ. ಬಿಸಿಯಾಗಿ ಒಂದು ಅನ್ನ ಮಾಡ್ಕಳಿ. ರಾತ್ರಿ ಹೊತ್ತಿಗೆ ಬಂದ್ಬಿಡ್ತೀವಿ’ ಅಂದಿತ್ತು ಹುಡುಗಿ. ಪಾಪದ್ದು. ಅಪ್ಪನ ಮನೆಯಲ್ಲಿ ಹುಳಿತು ಹೋಗುವಷ್ಟಿದೆ. ಆದರೂ ಒಂದು ದಿನ ತಲೆಪ್ರತಿಷ್ಠೆ ತೋರಿಸಿದ್ದಲ್ಲ. ‘ದೇವರು ಒಳ್ಳೆಯವರಿಗೇ ಕಷ್ಟ ಕೊಟ್ಟು ಪರೀಕ್ಷೆ ಮಾಡೋದು’ ಅಂದುಕೊಳ್ಳುತ್ತಾರೆ ಯಶೋದಮ್ಮ. ‘ಒಳ್ಳೆಯವರು’ ಎಂದು ತಮಗೆ ತಾವೇ ಹಣೆಪಟ್ಟಿ ಹಚ್ಚಿಕೊಳ್ಳಬಹುದಲ್ಲ? ಪಾಂಡವರು ಸ್ವಲ್ಪ ಕಷ್ಟ ಸೋಸಿದರಾ? ಕೊನೆಯಲ್ಲಿ ಎಲ್ಲಾ ಶುಭವಾಯ್ತು